RNI No. KARBIL/2001/47147

# ಕರ್ನಾಟಕ ಸರ್ಕಾರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ–I<br>Part–I | ಬೆಂಗಳೂರು, ಸೋಮವಾರ, ಸೆಪ್ಟೆಂಬರ್ ೧೦, ೨೦೧೮ (ಭಾದ್ರಪದ ೧೯, ಶಕ ವರ್ಷ ೧೯೪೦)<br>Bengaluru, Monday, September 10, 2018 (Bhadrapada 19, Shaka Varsha 1940) | ನಂ. ೧೩೨೦<br>No. 1320 |
|---|---|---|


**ಕರ್ನಾಟಕ ಸರ್ಕಾರದ ನಡವಳಿಗಳು**

**ಸಂಸದೀಯ ವ್ಯವಹಾರಗಳ ಸಚಿವಾಲಯ**

**ವಿಷಯ:** ಅಸ್ವಾಭಾವಿಕವಾಗಿ ಮರಣ ಹೊಂದಿದ ಶಾಸಕರಾದ ದಿವಂಗತ॥ ಸಿದ್ದು ನ್ಯಾಮಗೌಡ ಇವರ ಕುಟುಂಬದವರಿಗೆ ಪರಿಹಾರ ಧನವನ್ನು ನೀಡುವ ಬಗ್ಗೆ.

**ಓದಲಾಗಿದೆ:** (1) ದಿವಂಗತ॥ ಸಿದ್ದು ನ್ಯಾಮಗೌಡ, ಇವರ ಪತ್ನಿ ಶ್ರೀಮತಿ ಸುಮಿತ್ರ ಸಿದ್ದು ನ್ಯಾಮಗೌಡ, ಇವರ ಮನವಿ ದಿ: 14.07.2018

(2) ಸರ್ಕಾರದ ಆದೇಶ ಸಂಖ್ಯೆ: ಸಂವ್ಯಶಾಇ 04 ಸಂವ್ಯವಿ 97, ದಿ: 29.07.97

(3) ಸರ್ಕಾರದ ಆದೇಶ ಸಂಖ್ಯೆ: ಸಂವ್ಯಶಾಇ 10 ಸಂವ್ಯವಿ 2016, ದಿ: 20.08.2016

(4) ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಸಂವ್ಯಶಾಇ 10 ಸಂವ್ಯವಿ 2016, ದಿನಾಂಕ: 15.11.2016

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ ವಿಧಾನ ಸಭೆ ಸದಸ್ಯರಾಗಿದ್ದ ಶ್ರೀ ಸಿದ್ದು ನ್ಯಾಮಗೌಡ, ಜಮಖಂಡಿ ವಿಧಾನ ಸಭಾ ಕ್ಷೇತ್ರ, ಇವರ ಧರ್ಮಪತ್ನಿ ಶ್ರೀಮತಿ ಸುಮಿತ್ರ ಸಿದ್ದು ನ್ಯಾಮಗೌಡ, ತಮ್ಮ ಪತಿ ಅಸ್ವಾಭಾವಿಕವಾಗಿ ಮರಣ ಹೊಂದಿದ್ದರಿಂದ ನಿಗದಿತ ಪರಿಹಾರ ನೀಡುವಂತೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಯೊಂದಿಗೆ ಮರಣ ಪ್ರಮಾಣ ಪತ್ರ, ಕುಟುಂಬ ಸದಸ್ಯರ ಪಡಿತರ ಚೀಟಿ, ಮರಣೋತ್ತರ ಪರೀಕ್ಷೆಯ ವರದಿ, ಆಧಾರ್ ಕಾರ್ಡ್, 14ನೇ ವಿಧಾನಸಭೆ ಸದಸ್ಯರ ಗುರುತಿನ ಚೀಟಿ, ಕುಟುಂಬ ಸದಸ್ಯರ ಬ್ಯಾಂಕ್ ಖಾತೆ ಇವುಗಳ ಜೆರಾಕ್ಸ್ ಪ್ರತಿಗಳನ್ನು ಒದಗಿಸಿರುತ್ತಾರೆ. ಇವುಗಳನ್ನು ಪರಿಶೀಲಿಸಲಾಯಿತು.

ಓದಲಾದ (2)ರ ಸರ್ಕಾರಿ ಆದೇಶದಲ್ಲಿ ದಿನಾಂಕ: 1.10.1994ರ ನಂತರ ಸಂಭವಿಸಿದ ಕರ್ನಾಟಕ ವಿಧಾನ ಸಭಾ ಸದಸ್ಯರು, ವಿಧಾನ ಪರಿಷತ್ತಿನ ಸದಸ್ಯರು ಮತ್ತು ಕರ್ನಾಟಕದಿಂದ ಚುನಾಯಿತರಾದ ಸಂಸತ್ ಸದಸ್ಯರುಗಳ ಅಸ್ವಾಭಾವಿಕ ಮರಣಗಳ ಸಂದರ್ಭದಲ್ಲಿ ರೂ. 5.00 ಲಕ್ಷ ರೂಪಾಯಿಗಳ ಪರಿಹಾರವನ್ನು ಮಂಜೂರು ಮಾಡುವ ಅಧಿಕಾರವನ್ನು ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳ ಇಲಾಖೆ ಇವರಿಗೆ ನೀಡಲಾಗಿದೆ. ಸದರಿ ಬಾಬ್ತನ್ನು ಲೆಕ್ಕ ಶೀರ್ಷಿಕೆ: "2052 – ಸಚಿವಾಲಯ ಸಾಮಾನ್ಯ ಸೇವೆಗಳು–00–090–0–08 ಅಸ್ವಾಭಾವಿಕವಾಗಿ ಮರಣ ಹೊಂದಿದ್ದು, ಶಾಸಕರು ಮತ್ತು ಸಂಸತ್ ಸದಸ್ಯರ ಕುಟುಂಬಕ್ಕೆ ಪರಿಹಾರ" ದಡಿಯಲ್ಲಿ ಭರಿಸಲು ಆದೇಶಿಸಲಾಗಿದೆ.

ಓದಲಾದ (3)ರ ಸರ್ಕಾರಿ ಆದೇಶದಲ್ಲಿ ದಿನಾಂಕ: 20.08.2016 ರಲ್ಲಿ ಸದರಿ ವೆಚ್ಚವನ್ನ "ಲೆಕ್ಕ ಶೀರ್ಷಿಕೆ 2052– ಸಚಿವಾಲಯ ಸಾಮಾನ್ಯ ಸೇವೆಗಳು–00–090–0–08 ರಲ್ಲಿ ಅಸ್ವಾಭಾವಿಕವಾಗಿ ಮರಣ ಹೊಂದಿದ್ದು, ಶಾಸಕರು ಸಂಸತ್

ಸದಸ್ಯರ ಕುಟುಂಬಕ್ಕೆ ಪರಿಹಾರ" ಎಂಬ ಸಂಖ್ಯೆಗಳು ಮತ್ತು ಪದಗಳ ಬದಲಾಗಿ "ಮಂಜೂರು ಮಾಡಲಾದ ರೂ. 5.00 ಲಕ್ಷಗಳ ಮೊಬಲಗನ್ನು ಮೊದಲು ಸಾದಿಲ್ವಾರು ನಿಧಿಯ ಲೆಕ್ಕ ಶೀರ್ಷಿಕೆ: 8000–00–215–0–00 ರಡಿ ಬಿಡುಗಡೆ ಮಾಡಿ ನಂತರ ಲೆಕ್ಕಶೀರ್ಷಿಕೆ: 2052–00–90–0–08–100 ಧನಸಹಾಯ (ಯೋಜನೆತರ) ರಡಿ ಪೂರಕ ಅಂದಾಜು–2ರಲ್ಲಿ ನಿಧಿಗೆ ಮರು ತುಂಬಲಾಗುವುದು.

ಆರ್ಥಿಕ ಇಲಾಖೆಯು ರೂ. 5.00 ಲಕ್ಷಗಳನ್ನು (ರೂಪಾಯಿ ಐದು ಲಕ್ಷಗಳನ್ನು) ಸಾದಿಲ್ವಾರು ನಿಧಿಯಿಂದ ಬಿಡುಗಡೆ ಮಾಡಿ ಪ್ರತ್ಯೇಕ ಆದೇಶವನ್ನು ಹೊರಡಿಸುವುದು. ಆಡಳಿತ ಇಲಾಖೆಯು ಈ ಪ್ರತ್ಯೇಕ ಆದೇವಿಲ್ಲದೆಯೇ ಈ ಆದೇಶದ ಮೇಲೆಯೇ ಮೊಬಲಗನ್ನು ಪಡೆಯುವಂತಿಲ್ಲ. ಹಣ ಪಡೆಯುವ ಅಧಿಕಾರಿಯು ಸಾದಿಲ್ವಾರು ನಿಧಿಯಿಂದ ಹಣವನ್ನು ಪಡೆಯಲು ಬಿಲ್ಲನ್ನು ಖಜಾನೆಗೆ ಸಲ್ಲಿಸಿದಾಗ ಆರ್ಥಿಕ ಇಲಾಖೆಯು ಹೊರಡಿಸುವ ಪ್ರತ್ಯೇಕ ಆದೇಶವನ್ನು ಲಗತ್ತಿಸಿದ ನಂತರವೇ ಖಜಾನೆ ಹಣವನ್ನು ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು." ಎಂದು ಓದಿಕೊಳ್ಳುವಂತೆ ಆದೇಶಿಸಲಾಗಿದೆ

ಆದ್ದರಿಂದ ಈ ಆದೇಶ:–

**ಸರ್ಕಾರಿ ಆದೇಶ ಸಂಖ್ಯೆ: ಸಂವ್ಯಶಾಇ 07 ಸಂವ್ಯವಿ 2018 ದಿನಾಂಕ: 10.09.2018**

ವಿಧಾನ ಸಭೆ ಸದಸ್ಯರಾಗಿದ್ದ ದಿವಂಗತ॥ ಸಿದ್ದಪ್ಪ ನ್ಯಾಮಗೌಡ, ಜಮಖಂಡಿ, ಇವರು ಅಸ್ವಾಭಾವಿಕವಾಗಿ ದಿ: 28.05.2018ರಂದು ಅಪಘಾತದಲ್ಲಿ ಮರಣ ಹೊಂದಿದ್ದರಿಂದ, ಅವರ ಪತ್ನಿ ಶ್ರೀಮತಿ ಸುಮಿತ್ರ ಸಿದ್ದು ನ್ಯಾಮಗೌಡ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ, ಇವರಿಗೆ ರೂ.5.00 ಲಕ್ಷಗಳ ಪರಿಹಾರಧನವನ್ನು ಮಂಜೂರು ಮಾಡಲಾಗಿದೆ.

ಮಂಜೂರು ಮಾಡಲಾದ ರೂ. 5.00 ಲಕ್ಷಗಳ ಮೊಬಲಗನ್ನು ಮೊದಲು ಸಾದಿಲ್ವಾರು ನಿಧಿಯ ಲೆಕ್ಕ ಶೀರ್ಷಿಕೆ: 8000–00–215–0–00 ರಡಿ ಬಿಡುಗಡೆ ಮಾಡಿ ನಂತರ ಲೆಕ್ಕಶೀರ್ಷಿಕೆ: 2052–00–90–0 –08–100 ಧನಸಹಾಯ (ಯೋಜನೆತರ) ರಡಿ ಪೂರಕ ಅಂದಾಜು–2ರಲ್ಲಿ ನಿಧಿಗೆ ಮರು ತುಂಬಲಾಗುವುದು. ಆರ್ಥಿಕ ಇಲಾಖೆಯು ರೂ. 5.00 ಲಕ್ಷಗಳನ್ನು (ರೂಪಾಯಿ ಐದು ಲಕ್ಷಗಳನ್ನು) ಸಾದಿಲ್ವಾರು ನಿಧಿಯಿಂದ ಬಿಡುಗಡೆ ಮಾಡಿ ಪ್ರತ್ಯೇಕ ಆದೇಶವನ್ನು ಹೊರಡಿಸುವುದು. ಆಡಳಿತ ಇಲಾಖೆಯು ಈ ಪ್ರತ್ಯೇಕ ಆದೇಶವಿಲ್ಲದೆಯೇ ಈ ಆದೇಶದ ಮೇಲೆಯೇ ಮೊಬಲಗನ್ನು ಪಡೆಯುವಂತಿಲ್ಲ. ಹಣ ಪಡೆಯುವ ಅಧಿಕಾರಿಯು ಸಾದಿಲ್ವಾರು ನಿಧಿಯಿಂದ ಹಣವನ್ನು ಪಡೆಯಲು ಬಿಲ್ಲನ್ನು ಖಜಾನೆಗೆ ಸಲ್ಲಿಸಿದಾಗ ಆರ್ಥಿಕ ಇಲಾಖೆಯು ಹೊರಡಿಸುವ ಪ್ರತ್ಯೇಕ ಆದೇಶವನ್ನು ಲಗತ್ತಿಸಿದ ನಂತರವೇ ಖಜಾನೆ ಹಣವನ್ನು ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಸದರಿ ವೆಚ್ಚವನ್ನು ಲೆಕ್ಕಶೀರ್ಷಿಕೆ "2052–ಸಚಿವಾಲಯ ಸಾಮಾನ್ಯ ಸೇವೆಗಳು–00–090–0–08ರಲ್ಲಿ ಅಸ್ವಾಭಾವಿಕವಾಗಿ ಮರಣ ಹೊಂದಿದ್ದು, ಶಾಸಕರ ಮತ್ತು ಸಂಸತ್ ಸದಸ್ಯರ ಕುಟುಂಬಕ್ಕೆ ಪರಿಹಾರ–100– ಧನಸಹಾಯ" ಶೀರ್ಷಿಕೆಯಡಿಯಲ್ಲಿ ಭರಿಸಲು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಕೆ. ದ್ವಾರಕನಾಥ್ ಬಾಬು**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: